ಬದುಕಲು ಅಡಿಕೆಯೊಂದೇ ಸಾಲದು

ಬೇಸಾಯ

ಮಲ್ಲಿಕಾರ್ಜುನ ಹೊಸಪಾಳ್ಯ

ಅಡಿಕೆ ತೋಟಗಳು ಮಲೆನಾಡನ್ನು ದಾಟಿ ದಶಕಗಳಾಗಿವೆ. ಭತ್ತದ ಹಾಟುಗಳೆಲ್ಲಾ ಅಡಿಕೆಗೆ ಶರಣಾಗಿವೆ. ಭದ್ರಾವತಿ ತಾಲ್ಲೂಕಿನ ಗೊಂದಿ ಅಣೆಕಟ್ಟೆ ಮತ್ತು ಭದ್ರಾ ನಾಲೆ ಅಚ್ಚುಕಟ್ಟು ಪ್ರದೇಶಗಳು ಒಂದು ಕಾಲಕ್ಕೆ ಭತ್ತದ ಕಣಜ. ಆದರೆ ಈಗ ಕೆಲವೇ ಕಡೆ ಭತ್ತ ಉಳಿದಿದೆ. ಎಷ್ಟೋ ರೈತರು ತಮ್ಮ ಇಡೀ ಜಮೀನನ್ನು ಅಡಿಕೆಗೆ ಪರಿವರ್ತಿಸಿದ್ದಾರೆ. ಕೆಲವೇ ರೈತರು ಮಾತ್ರ ಅಡಿಕೆ ಜೊತೆಗೆ ಭತ್ತವನ್ನು ಉಳಿಸಿಕೊಂಡಿರುವುದನ್ನು ಕಾಣಬಹುದು. ಅಂತಹವರಲ್ಲಿ ಸೀಗೆಬಾಗಿ ಗ್ರಾಮದ ಶಾಂತಪ್ಪ ಒಬ್ಬರು. ಅಡಿಕೆ ನಡುವೆ ಹತ್ತಾರು ಮಿಶ್ರಬೆಳೆ ಹಾಕುತ್ತಿರುವುದೂ ಸಹ ಇವರ ವಿಶೇಷ.

ಅಡಿಕೆಯಲ್ಲಿ ಬಹುಬೆಳೆ

ಇವರಿಗೆ 8 ಎಕರೆ ಜಮೀನಿದೆ. ಅದರಲ್ಲಿ 2.5 ಎಕರೆ ಭತ್ತ ಬೆಳೆಯುತ್ತಾರೆ. 2 ಎಕರೆ ಹಳೆಯಅಡಿಕೆ ತೋಟ. ಇದರಲ್ಲಿ ಬಹು ಮಹಡಿ ಬೆಳೆ ಪದ್ಧತಿಯನ್ನು ಅಳವಡಿಸಿದ್ದಾರೆ. ಅಡಿಕೆ ಮಧ್ಯದಲ್ಲಿ ಹಾಗೂ ಬದುಗಳ ಮೇಲೆ 500 ಕೋಕೋ, 500ಬಾಳೆ, 32 ತೆಂಗು ಮುಂತಾದ ವಾರ್ಷಿಕ ಬೆಳೆಗಳನ್ನು ಸಂಯೋಜಿಸಿರುತ್ತಾರೆ. ಮಾವು, ಸೀಬೆ, ಹಲಸು,ಜಾಕುಮೋಸು, ಗಜನಿಂಬೆ ಸಸಿಗಳೂ ಇವೆ.

ಉಳಿದ 3.5 ಎಕರೆಯಲ್ಲಿ ಎಳೆ ಅಡಿಕೆ ಸಸಿಗಳಿವೆ. ಸಸಿಗಳು ಚಿಕ್ಕದಾಗಿರುವುದರಿಂದ ನಡುವೆ ಪ್ರತಿವರ್ಷ ಬೇಸಿಗೆಯಲ್ಲಿ ರಾಗಿ ಹಾಗೂ ಅಲಸಂದೆಯನ್ನು ಬೆಳೆಯುತ್ತಾರೆ."ಅಡಿಕೆ ಆಳೆತ್ತರ ಬೆಳೆಯುವವರೆಗೂ ಅಂತರಬೆಳೆ ಹಾಕಲು ಏನೂ ಸಮಸ್ಯೆ ಇಲ್ಲ" ಎಂಬುದು ಶಾಂತಪ್ಪ ಅನಿಸಿಕೆ.

ಇವರ ಅಡಿಕೆ ನಾಟಿರುವ ಜಮೀನು ತುಂಬಾ ಫಲವತ್ತಾದುದಲ್ಲ. ನೀರು ಸರಾಗವಾಗಿ ಇಂಗದೆ ಅಡಿಕೆ ಸಸಿಗಳ ಬೆಳವಣಿಗೆ ಕುಂಠಿತವಾಗಿತ್ತು. ಇದನ್ನು ಮನಗಂಡ ಶಾಂತಪ್ಪ ಅಡಿಕೆಯ ಮಧ್ಯದಲ್ಲಿ 2 ಸಾಲುಗಳ ನಡುವೆ ಒಂದೊಂದು ಅಡಿ ಆಳದ ಬಸಿಗಾಲುವೆಗಳನ್ನು ತೆಗೆದಿದ್ದಾರೆ. ಬೇಸಿಗೆಯಲ್ಲಿ ಆ ಬಸಿಗಾಲುವೆಗಳಿಗೆ ತೋಟದಲ್ಲಿ ಬೀಳುವ ಕಸ ಕಡ್ಡಿಗಳನ್ನು ತುಂಬಿ ಕಳೆಸುತ್ತಿದ್ದಾರೆ.ನೀರು ನಿಲ್ಲುವುದೂ ತಪ್ಪಿತು, ಗೊಬ್ಬರವೂ ಆಯಿತು.ತೋಟದಲ್ಲಿ ನೀರು ನಿಂತು ಜೌಗು ಉಂಟಾಗುವುದಿಲ್ಲ. ಜೊತೆಗೆ ಮಣ್ಣಿನ ರಚನೆ ಹಾಳಾಗುವುದಿಲ್ಲ, ಅಡಿಕೆ ಸಸಿಗಳು ಹಳದಿಯಾಗುವುದನ್ನು ತಡೆಯಬಹುದು ಎಂಬುದು ಇವರ ಅನುಭವ.

ತಮ್ಮ ವ್ಯವಸಾಯದ ಬಗ್ಗೆ ಅಕ್ಕ-ಪಕ್ಕದ ರೈತರಿಗೆ ಮಾರ್ಗದರ್ಶನ ನೀಡುತ್ತಿರುವುದು ವಿಶೇಷ. ನೆಲಮಟ್ಟದ ಕೆಲಸ ಮಾಡುವ ಶಾಂತಪ್ಪನವರ ಬಗ್ಗೆ ಗ್ರಾಮದಲ್ಲಿ ಎಲ್ಲರೂ ಗೌರವವನ್ನು ಇಟ್ಟುಕೊಂಡಿದ್ದಾರೆ.ಇವರ 8 ಎಕರೆ ಜಮೀನಿನ ವಾರ್ಷಿಕ ಕೃಷಿ ವೆಚ್ಚವು ಅಂದಾಜು ಎರಡು ಲಕ್ಷ ರೂ. ಇದ್ದರೆ, ಅಡಿಕೆ, ಭತ್ತ, ಬಾಳೆ ಹಾಗೂ ಇತರೆ ಬೆಳೆಗಳ ಮಾರಾಟದಿಂದ ಬರುವ ಆದಾಯ ಸುಮಾರು ಒಂಭತ್ತು ಲಕ್ಷ ರೂ.ಗಳು.

'ಶ್ರೀ' ಪದ್ಧತಿಯಲ್ಲಿ ಭತ್ತ

ಗೊಂದಿ ನೀರಾವರಿ ಕಾಲುವೆ ವ್ಯಾಪ್ತಿಯಲ್ಲಿ ಬರುವ ಇವರಿಗೆ ನೀರಿನ ಕೊರತೆ ಇಲ್ಲ. ಆದರೆ ಕಡಿಮೆ ನೀರು ಕೇಳುವ 'ಶ್ರೀ' ಪದ್ಧತಿಯಲ್ಲಿ ಭತ್ತ ಬೆಳೆದಿದ್ದಾರೆ. ಪ್ರತಿ ಬೆಳೆಗೂ ಅಗತ್ಯವಿರುವಷ್ಟೇ ನೀರು ಕೊಡುವುದು ಇವರ ಪದ್ಧತಿ.

ಶಾಂತಪ್ಪನವರ ಮಡದಿ ಕಮಲ ಗೊಂದಿ ವ್ಯಾಪ್ತಿಯ ಸೀಗೆಬಾಗಿ ನೀರು ಬಳಕೆದಾರ ಸಹಕಾರ ಸಂಘದ ಸದಸ್ಯರಾಗಿದ್ದಾರೆ. ಸಭೆಯೊಂದರಲ್ಲಿ ಭತ್ತದಲ್ಲಿ 'ಶ್ರೀ' ಪದ್ಧತಿಯ ಕುರಿತು ಮಾಹಿತಿ ನೀಡುತ್ತಿದ್ದಾಗ, ತಾವು ಒಂದು ಎಕರೆಯಲ್ಲಿ ಈ ಪದ್ಧತಿ ಅನುಸರಿಸಿ ಪ್ರಾತ್ಯಕ್ಷಿಕೆ ಮಾಡುವುದಾಗಿ ಆಸಕ್ತಿ ವ್ಯಕ್ತಪಡಿಸಿದರು. ಅದೇ ರೀತಿ ಜನವರಿ 15, 2019ರಂದು ಅಮನ್ ಸೋನಾ ತಳಿಯ 2 ಕೇಜಿ ಬೀಜವನ್ನು ನರ್ಸರಿ ಬಿಟ್ಟರು. ದಿನಾಂಕ 30.1.2019ರಂದು 15 ದಿನಗಳ ಸಸಿಗಳನ್ನು ನಾಟಿ ಹಾಕಿದರು. ಸಾಲಿನಿಂದ ಸಾಲಿಗೆ ಒಂದು ಅಡಿ ಹಾಗೂ ಸಸಿಯಿಂದ ಸಸಿಗೆ 6 ಇಂಚು ಅಂತರ ಬಿಟ್ಟಿರುತ್ತಾರೆ. ನಾಟಿ ಹಾಕುವಾಗ ಟ್ರೈಕೋಡರ್ಮಾ ಜೈವಿಕ ಗೊಬ್ಬರದಿಂದ ಸಸಿಗಳಿಗೆ ಉಪಚಾರ ಮಾಡಿರುತ್ತಾರೆ. ಸಾಲು ಹೊಡೆಯಲು ಹಾಗೂ ಕಳೆ ತೆಗೆಯಲು ತಮ್ಮದೇ ಸಾಧನವನ್ನು ಬಳಸಿರುವುದು ಇವರ ವೈಶಿಷ್ಟ್ಯ (ಬಾಕ್ಸ್ 1 ನೋಡಿ

ಇದಕ್ಕೆ ಮುನ್ನ ಒಂದು ಟ್ರ್ಯಾಕ್ಟರ್ ಲೋಡ್ ಸಗಣಿ ಗೊಬ್ಬರವನ್ನು ಭೂಮಿಗೆ ಸೇರಿಸಿ ಉಳುಮೆ ಮಾಡಿದ್ದರು. ಕಳೆ ತೆಗೆಯುವ ಸಂದರ್ಭದಲ್ಲಿ ತಮ್ಮದೇ ಆದ ವಿಶೇಷ ವೀಡರ್ ಅಭಿವೃದ್ಧಿಪಡಿಸಿಕೊಂಡು ಬಳಸಿದ್ದು ಇವರ ವಿಶೇಷ (ಬಾಕ್ಸ್ 2 ನೋಡಿ).

ಹೆಚ್ಚು ಅಂತರ ಕೊಟ್ಟು ನಾಟಿ ಮಾಡಿರುವುದರಿಂದ ಸರಾಸರಿ 30-40 ತೆಂಡೆ ಬಂದಿರುತ್ತವೆ. 4 ಅಡಿ ಎತ್ತರವಿದ್ದು, ತೆನೆಗಳ ಉದ್ದವು 10 ಇಂಚು. ಪ್ರತಿಯೊಂದು ತೆನೆಯಲ್ಲಿ ಸರಾಸರಿ 150 ಕಾಳುಗಳು ಹಿಡಿದಿವೆ.3 ದಿನಕ್ಕೊಮ್ಮೆ ಮಾತ್ರ ಭೂಮಿ ತೇವವಾಗುವಂತೆ ನೀರನ್ನು ಹಾಯಿಸಿದ್ದಾರೆ. . ಮೇ ಕೊನೆಯ ವಾರ ಕಟಾವು ಮಾಡಿದ್ದು 35 ಕ್ವಿಂಟಾಲ್ ಇಳುವರಿ ಬಂದಿದೆ.

ಇವರಿಗೆ ಇಬ್ಬರು ಮಕ್ಕಳಿದ್ದು, ಮಗಳು ಭೂಮಿಕಾ ಇಂಜಿನಿಯರಿಂಗ್ ಹಾಗೂ ಮಗ ಚೇತನ್ ಬಿ.ಕಾಮ್. ಪದವಿಯನ್ನು ಓದುತ್ತಿದ್ದು, ಕೃಷಿಯಲ್ಲಿ ಸಹಾಯ ಮಾಡುತ್ತಿರುತ್ತಾರೆ.

ಇವರು 2008ರಿಂದ ನೈಸರ್ಗಿಕ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಂಡಿದ್ದಾರೆ. ತಮ್ಮ ಜಮೀನಿನಲ್ಲಿ ಬೀಳುವ ಕಸ-ಕಡ್ಡಿಗಳನ್ನು ಹೊರಗಡೆ ಹಾಕದೆ ಗೊಬ್ಬರವಾಗಿ ಬಳಸಿಕೊಳ್ಳಲು ಆರಂಭಿಸಿದರು. ಇದರಿಂದ ಕ್ರಮೇಣ ಇವರ ಕೃಷಿ ವೆಚ್ಚ ಕಡಿಮೆಯಾಗುತ್ತಿದೆ.

ವಿಳಾಸ: ಶ್ರೀ ಶಾಂತಪ್ಪ ಹಳೇ ಸೀಗೆಬಾಗಿ, ಭದ್ರಾವತಿ, ಶಿವಮೊಗ್ಗ ಜಿಲ್ಲೆ ಮೊ: 9002192002

ಸಾಲು: ಸರಳ ಸಾಧನ

ಶ್ರೀ ಪದ್ಧತಿ ಅನುಸರಿಸಿ ಭತ್ತ ನಾಟಿ ಮಾಡುವಾಗ ಸಾಲುಗಳನ್ನು ಎಳೆಯುವುದೇ ಕಷ್ಟ. ಈ ಸಮಸ್ಯೆಗೊಂದು ಸರಳ ಪರಿಹಾರ ಕಂಡುಕೊಂಡಿದ್ದಾರೆ ಶಾಂತಪ್ಪ. 6 ಅಡಿ ಉದ್ದದ ಮರದ ತುಂಡಿಗೆ 12 ಇಂಚು ಅಂತರದಲ್ಲಿ ಮೊಳೆಗಳನ್ನು ಹೊಡೆದಿದ್ದಾರೆ. ಕೈಯಿಂದ ಎಳೆಯಲು ಅನುಕೂಲವಾಗುವಂತೆ ಮರದ ತುಂಡಿಗೆ ಕಬ್ಬಿಣದ ತಂತಿಯನ್ನು ಜೋಡಿಸಿದ್ದು, ಅದನ್ನು ಎಳೆಯುತ್ತಾ ಹೋದರೆ ಒಮ್ಮೆಗೇ 7 ಸಾಲು ಮೂಡುತ್ತವೆ. ತುಂಡನ್ನು ಎಳೆಯುವಾಗ ಗದ್ದೆಯಲ್ಲಿ ತೇವ ಮಾತ್ರ ಇರುವಂತೆ ನೋಡಿಕೊಂಡರೆ ಸಾಲುಗಳು ಸ್ಪಷ್ಟವಾಗಿ ಮೂಡುತ್ತವೆ.ಶಾಂತಪ್ಪ ತಾವೇ ಆಲೋಚಿಸಿ ಈ ಉಪಾಯ ಕಂಡುಕೊಂಡಿದ್ದಾರೆ. ಮನೆಯಲ್ಲೇ ಲಭ್ಯವಿದ್ದ ವಸ್ತುಗಳನ್ನೇ ಬಳಸಿರುವುದರಿಂದ ಯಾವುದೇ ಖರ್ಚು ಬಂದಿಲ್ಲ.

ಕಳೆ: ಸ್ವಂತ ವೀಡರ್

ಶ್ರೀ ಪದ್ಧತಿಯಲ್ಲಿ ಕಳೆ ತೆಗೆಯಲು ಮತ್ತು ಮಣ್ಣು ಸಡಿಲಗೊಳಿಸಲು ವೀಡರ್‌ಗಳನ್ನು ಬಳಸಲಾಗುತ್ತದೆ. ಆದರೆ ಶಾಂತಪ್ಪ ತಮ್ಮದೇ ಆದ ಸಾಧನವನ್ನು ತಯಾರಿಸಿಕೊಂಡಿದ್ದಾರೆ. ಮರದ ತುಂಡು ಹಾಗೂ ಕಬ್ಬಿಣದ ಬ್ಲೇಡುಗಳನ್ನು ಬಳಸಿ ಇದನ್ನು ತಯಾರಿಸಿರುವುದು ವಿಶೇಷ. ಇದಕ್ಕೆ ಖರ್ಚಾಗಿರುವುದು ಕೇವಲ ರೂ. 200 ಮಾತ್ರ. ಸುಲಭವಾಗಿ ಬಳಸಬಹುದಾದ ಸಾಧನವಿದು.